


ಕಡಲಾಮೆಗಳ ಸಂರಕ್ಷಿತ ಗೂಡನ್ನು ಕುತೂಹಲದಿಂದ ವೀಕ್ಷಣೆ ಮಾಡುತ್ತಿರುವ ಪ್ರವಾಸಿ

ಮೇಲೆದ್ದು ಬರುತ್ತವೆ ಹೇಗೆ? ಎಲ್ಲ ಒಟ್ಟಾಗಿಯೇ ಮೇಲಕ್ಕೆದ್ದು ಬರಬೇಕೆಂದು ಅವು ಪರಸ್ಪರ ಸಿಗ್ನಲ್ ಕೊಡುತ್ತವೆಂದೂ, ಜಾಸ್ತಿ ಮೊಟ್ಟೆಗಳಲ್ಲಿರುವ ಗೂಡುಗಳೇ ಬಹುಬೇಗ ಖಾಲಿ ಆಗುತ್ತವೆಂದೂ ಕಡಿಮೆ ಮೊಟ್ಟೆಗಳಿರುವ ಗೂಡುಗಳಿಂದ ಮರಿಗಳು ನಿಧಾನಕ್ಕೆ ಹೊರಬರುತ್ತವೆಂದೂ ಪ್ರಯೋಗಗಳ ಮೂಲಕ ಪತ್ತೆ ಹಚ್ಚಿದ್ದಾರೆ.

ನಮ್ಮೆದುರಿನ ಮರಳ ಗೂಡಿನಿಂದ ಮೇಲೆದ್ದು ಬಂದ ಪುಟ್ಟ ಪುಟ್ಟ ಮರಿಗಳು ರೆಕ್ಕೆ ಬಡಿಯುತ್ತ ಸುತ್ತಲಿನ ಜಾಳಿಗೆ ಬಲೆಯನ್ನು ಭೇದಿಸಲು ಯತ್ನಿಸುತ್ತಿದ್ದಂತೆ ಕಾಣುತ್ತಿತ್ತು. ಅಷ್ಟರಲ್ಲಿ ಇನ್ನಿಬ್ಬರು ಒಂದು ನೀಲಿ ಟಬ್‌ನಲ್ಲಿ ಹತ್ತಾರು ಲೀಟರ್ ಸಮುದ್ರದ ನೀರನ್ನು ತುಂಬಿಸಿ ತಂದಿದ್ದರು. ನಾವೆಲ್ಲ ನೋಡುತ್ತಿದ್ದಂತೆ ಒಬ್ಬ ಯುವಕ ಮಂಡಿಯೂರಿ ಕೂತು ರಕ್ಷಣಾ ಬೇಲಿಯ ತಳದಲ್ಲಿ ಕೈಹಾಕಿ, ಬಲೆಯನ್ನು ತುಸು ಮೇಲಕ್ಕೆತ್ತಿ ಮೂರು ಮೂರು, ನಾಲ್ಕು ನಾಲ್ಕು ಮರಿಗಳನ್ನು ಹುಷಾರಾಗಿ ಎತ್ತಿ ಟಬ್‌ನಲ್ಲಿ ಇಳಿಬಿಟ್ಟ. ಇನ್ನೊಬ್ಬ ಯುವಕ ಒಟ್ಟು ಮರಿಗಳನ್ನು ಲೆಕ್ಕ ಮಾಡುತ್ತ ಹೋದ. ಅವುಗಳಲ್ಲಿ ಹೆಣ್ಣೆಷ್ಟು, ಗಂಡೆಷ್ಟು ಎಂಬುದನ್ನು ಪತ್ತೆ ಮಾಡುವಷ್ಟು ಪರಿಣತಿ ಅವರಲ್ಲಿರಲಿಲ್ಲ. ಗೂಡಿನಲ್ಲಿ ಸೆಕೆ ಜಾಸ್ತಿಯಾದರೆ ಹೆಣ್ಣುಗಳೇ ಜಾಸ್ತಿ ಹುಟ್ಟುತ್ತವೆ. ಗೂಡಿನ ಸುತ್ತ ರಕ್ಷಣಾಪರದೆ ಕಟ್ಟಿಟ್ಟಿದ್ದರೆ ಗಂಡುಗಳೇ ಜಾಸ್ತಿ ಹುಟ್ಟುತ್ತವೆ. ಈಗಿನ ಹವಾಗುಣ ಬದಲಾವಣೆಯಿಂದ ಎಲ್ಲೆಲ್ಲೂ ಸಮುದ್ರತೀರದ ಮರಳು ಜಾಸ್ತಿ ಬಿಸಿ ಆಗುತ್ತಿರುವುದರಿಂದ ಹೆಣ್ಣುಗಳೇ ಜಾಸ್ತಿ ಹುಟ್ಟುತ್ತವೆ ಎಂದು



ಮೊಟ್ಟೆಗೂಡಿನ ಸ್ಥಳವನ್ನು ಗುರುತಿಸುತ್ತಿರುವ ರಮೇಶ್ ತಾಂಡೇಲ

ವಿಜ್ಞಾನಿಗಳು ಆತಂಕಪಡುತ್ತಿರುವುದು ಈ ಮುಗ್ಧರಿಗೆ ಗೊತ್ತಾಗುವುದು ಹೇಗೆ?

ಟಬ್ ತುಂಬೆಲ್ಲ ಸದ್ದಿಲ್ಲದ ಚಿಲಿಪಿಲಿ ಎಂಬಂತೆ ಎಲ್ಲ ಮರಿಗಳೂ ಎಡೆಬಿಡದೆ ರೆಕ್ಕೆಗಳನ್ನು ಬಡಿಯುತ್ತಿದ್ದವು. ಜೀವಂತ ಹೂ ಪಕಳೆಗಳಂತೆ ಚಡಪಡಿಸುತ್ತ ಕಪ್ಪು–ಕಂದುಬಣ್ಣದ ಆ ಎಳೆಜೀವಗಳು ಸಮುದ್ರದ ತೆರೆಗಾಗಿ ಹಾತೊರೆಯುತ್ತಿದ್ದವು. ನೀರಲ್ಲಿ ಕೈ ಇಟ್ಟರೆ ಕೈಮೇಲೆಲ್ಲ ಪಟಪಟ ಏರಲು ಯತ್ನಿಸುತ್ತಿದ್ದವು.

ಕಗ್ಗತ್ತಲ ಬಾನ ತುಂಬ ಚುಕ್ಕಿಗಳು. ಅಷ್ಟಮಿ ಚಂದ್ರ; ಅದರ ಜೊತೆಗೇ ಪ್ರಖರ ಬೆಳಕಿನ ಶುಕ್ರಗ್ರಹ. ನೇರ ನೆತ್ತಿಯ ಮೇಲೆ ಮಂಗಳ.

ಮಂಗಳ ಕಾರ್ಯವೊಂದಕ್ಕೆ ಹೊರಟಂತೆ ಯುವಕರ ಇಡೀ ತಂಡ ಆ ನೀಲಿ ಟಬ್ಬನ್ನು ಹೊತ್ತು ನೂರು ಮೀಟರ್ ಆಚಿನ ಕಡಲಂಚಿಗೆ ಬಂತು. ಗಾಳಿ ಜೋರಾಗಿತ್ತು. ಕಡಲ ಮೊರೆತ ಗಡಚಿಕ್ಕುವಂತಿತ್ತು. ಟಬ್‌ನಲ್ಲಿದ್ದ 82 ಮರಿಗಳನ್ನು ಎತ್ತಿ ಸಮುದ್ರಕ್ಕೆ ಬಿಡುವಂತೆ ನನಗೇ ಸೂಚನೆ ಬಂತು. "ಯಾಕೆ, ಫಾರೆಸ್ಟ್ ಇಲಾಖೆಯ ಯಾರೂ ಬರೋಲ್ಲವಾ?" ಕೇಳಿದೆ. "ರಾತ್ರಿ ಹೊತ್ನಲ್ಲಿ ಆಫೀಸರ್ ಯಾರೂ ಬರೋದಿಲ್ಲ; ಕಾವಲು ಡ್ಯೂಟಿ ಮಾಡೋಕೆ ನಮ್ಮೂರಿನದೇ ಒಬ್ಬನ್ನ ಇಟ್ಟಿದಾರೆ" ಎನ್ನುತ್ತ ಯಾರೋ ಒಬ್ಬಾತ "ಓ ಯಶ್‌ವಂತ್ ಬಾರೋ ಇಲ್ಲಿ!" ಎಂದು ಕತ್ತಲಲ್ಲಿ ಮುಖ ತಿರುಗಿಸಿ ಕೂಗಿದ.

### ಹುಷಾರಾಗಿ ಹೆಜ್ಜೆ ಇಡಿ, ತುಳಿದೀರಿ...

ನಿರಂತರವಾಗಿ ರೆಕ್ಕೆ ಬಡಿಯುತ್ತ ತಕಪಕ ತವಕಿಸುತ್ತಿದ್ದ ಆಮೆ ಮರಿಗಳಿಗೆ ಈಗ ಬಿಡುಗಡೆಯ ಸಮಯ. ತೀರಾ ಹೆಚ್ಚು ಹೊತ್ತು ಅವುಗಳನ್ನು ತೊಟ್ಟಿಯಲ್ಲಿ ಬಂಧಿಸಿ ಇಡಬಾರದು. ಇಟ್ಟರೆ ಅಲ್ಲೇ ರೆಕ್ಕೆ ಬಡಿಯುತ್ತ ಸುಸ್ತಾಗಿ, ಆಮೇಲೆ ಸಾಗರದಲ್ಲಿ ಈಜುವ ತಾಕತ್ತನ್ನೇ ಕಳೆದುಕೊಳ್ಳುತ್ತವೆ. ಅದಕ್ಕೇ ತುಸು ಅವಸರದಲ್ಲಿ ಎಂಬಂತೆ ಬೊಗಸೆಯಲ್ಲಿ ಎತ್ತಿ ಎತ್ತಿ ಅವನ್ನು ಒದ್ದೆ ಮರಳಿನ ಮೇಲೆ ಬಿಟ್ಟದ್ದೇ ಬಿಟ್ಟದ್ದು, ಸಮುದ್ರದ ಕಡೆ ಎಲ್ಲವೂ ನುಗ್ಗತೊಡಗಿದವು. ದೊಡ್ಡ ತೆರೆಯೊಂದು ಬಂದಿದ್ದೇ ತಡ, ಮರಿಗಳು ಸಮುದ್ರ ಸೇರುವ ಆ